ಪ್ರಸ್ತುತಿ:
ಪಿವಿ ಬ್ರ್ಯಾಂಡ್ ಸ್ಪಾಟ್

Freedom Refined Sunflower Oil presents
ಕರುನಾಡ ಸವಿಯೂಟ

## ಬಾಯಲ್ಲಿ ನೀರೂರಿಸುವ ಸವಿರುಚಿ

# ಮನಮುದಗೊಳಿಸುವ ಅಡುಗೆ ಕಲೆಯ ಗುಟ್ಟು ರಟ್ಟು

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಆನ್‌ಲೈನ್ ಆವೃತ್ತಿಯಲ್ಲಿ ಮೂಡಿಬರುತ್ತಿರುವ ಫ್ರೀಡಂ ರಿಫೈನ್‌ಡ್ ಸನ್‌ಫ್ಲವರ್ ಆಯಿಲ್ 'ಕರುನಾಡ ಸವಿಯೂಟ' ಪ್ರಸ್ತುತಿ ರುಚಿ ಮತ್ತು ಪ್ರತಿಭೆಯ ಸಮ್ಮಿಲನ. ಅಕ್ಟೋಬರ್ 9ರಂದು ಆರಂಭವಾದ ಈ ಅಡುಗೆ ಹಬ್ಬ ಒಟ್ಟು 15 ಬಗೆಯ ತಿನಿಸುಗಳನ್ನು ಏಳು ವಾರಗಳಲ್ಲಿ ನಿಮ್ಮ ಮುಂದಿಡುತ್ತಿದೆ. bit.ly/PVCuisines ನಲ್ಲಿ ಟ್ರೆಂಡ್ ಆಗಿರುವ ಈ ಕಾರ್ಯಕ್ರಮ ದೇಶದಾದ್ಯಂತ ವಿವಿಧ ವರ್ಗಗಳ ಜನರ ಮೆಚ್ಚುಗೆ ಗಳಿಸಿದೆ. ಭೋಜನಪ್ರಿಯರು ಕರ್ನಾಟಕದ ಪಾಕಪದ್ಧತಿಯಲ್ಲಿ ಸವಿಯೂಟ ಸಿದ್ಧಪಡಿಸಿ ಖುಷಿಯ ಖಜಾನೆಯನ್ನು ಬಗೆದು ತೆಗೆಯುತ್ತಿದ್ದರೆ, ಬಾಣಸಿಗರು ಮತ್ತು ಆಹಾರೋದ್ಯಮಿಗಳೂ ಇದರಿಂದ ಪ್ರೇರಣೆ ಪಡೆಯುತ್ತಿರುವುದು ಸುಸ್ಪಷ್ಟ.





### ಕರ್ನಾಟಕದ ಸವಿಯೂಟದ್ದೇ ಸದ್ದು




ಫ್ರೀಡಂ ಅಡುಗೆ ಎಣ್ಣೆಯ 'ಕರುನಾಡ ಸವಿಯೂಟ' ಅಭೂತಪೂರ್ವವಾಗಿ ಟ್ರೆಂಡಿಂಗ್ ಆಗಿಬಿಟ್ಟಿದೆ. ಅಷ್ಟೇ ಅಲ್ಲ, ದೇಶದಾದ್ಯಂತ ಈ ಕಾರ್ಯಕ್ರಮಕ್ಕೆ ಮೆಚ್ಚುಗೆಗಳ ಸುರಿಮಳೆಯಾಗುತ್ತಿದೆ. ತಾರಾ ಮೌಲ್ಯವಿರುವ ಮೂವರು ಪಾಕಪ್ರವೀಣರನ್ನು ಈ ಆನ್‌ಲೈನ್ ಆಹಾರ ಉತ್ಸವಕ್ಕಾಗಿ ಆಯ್ಕೆ ಮಾಡಲಾಗಿದೆ. ಅವರು ಸರಳ ವಿವರಣೆಗಳ ಮೂಲಕ ರಾಜ್ಯದ ವೈವಿಧ್ಯಮಯ ಸಾಂಪ್ರದಾಯಿಕ ತಿನಿಸುಗಳನ್ನು ತಯಾರಿಸುವ ಬಗೆಯನ್ನು ನಿಮ್ಮ ಮುಂದಿಡುತ್ತಿದ್ದಾರೆ. ತಾವು ತಯಾರಿಸುವ ತಿಂಡಿ ತಿನಿಸುಗಳ ಸೂಕ್ಷ್ಮ ವ್ಯತ್ಯಾಸಗಳನ್ನು ವಿವರಿಸುವುದರ ಜೊತೆಗೆ ಅವುಗಳ ಹಿಂದಿನ ಕತೆಗಳನ್ನು ರಸವತ್ತಾಗಿ ಕಟ್ಟಿಕೊಡುತ್ತಿದ್ದಾರೆ. ತಮ್ಮ ಮಾತುಗಾರಿಕೆ ನಡುನಡುವೆ ಅವರು ನೀಡುವ ಟ್ವಿಸ್ಟ್‌ಗಳು ಹಾಗೂ ಹಂಚಿಕೊಳ್ಳುವ ಸ್ವಾರಸ್ಯಕರ ಸಂಗತಿಗಳನ್ನು ಚಾಚೂತಪ್ಪದೇ ಪಾಲಿಸುತ್ತಾ ದೇಶದಾದ್ಯಂತ ಅನೇಕರು ತಮ್ಮ ಅಡುಗೆ ಮನೆಗಳಲ್ಲಿ ಈ ತಿನಿಸುಗಳನ್ನು ತಯಾರಿಸುವ ಪ್ರಯತ್ನ ಮಾಡುತ್ತಿದ್ದಾರೆ.



### ಅಡುಗೆ ಮನೆಯಲ್ಲೇ ಸಾಹಸ ಮಾಡೋಣ

ಅಡುಗೆಮನೆಯಲ್ಲೇ ಸಾಹಸ ಮಾಡುವ ಪ್ರವೃತ್ತಿ ನಿಮ್ಮದಾಗಿದ್ದರೆ, ದಿಢೀರ್ ತಾರಾಪಟ್ಟ ಗಿಟ್ಟಿಸುವ ಕೆಲವು ಗುಟ್ಟುಗಳು ಇಲ್ಲಿವೆ. ಈ ಹಬ್ಬದ ದಿನಗಳಲ್ಲಿ ನಿಮ್ಮವರನ್ನು ಮೋಡಿ ಮಾಡುವ ಉಪಾಯ ಹುಡುಕಲು bit.ly/PVCuisines ನಲ್ಲಿ ಏನೆಲ್ಲ ಅಡುಗೆ ವಿಧಾನಗಳಿವೆ ನೋಡಿ. ಬೆಂಗಳೂರು, ಮಲೆನಾಡು, ಕೊಡಗು ಹಾಗೂ ಕರಾವಳಿ ತೀರದ ವಿಶಿಷ್ಟ ಸ್ವಾದಗಳೂ ಸೇರಿದಂತೆ ಇಲ್ಲಿ ನಿಮ್ಮ ಮುಂದೆ ವೈವಿಧ್ಯಮಯ ತಿನಿಸುಗಳ ಖಜಾನೆಯೇ ತೆರೆದುಕೊಳ್ಳುತ್ತದೆ.

ಪಾಕದಲ್ಲೇ ನಾಕ ಸೃಷ್ಟಿಸುವವರ ಬಗ್ಗೆ....

ಈ ಮೂವರು ಪಾಕಪ್ರವೀಣರು ಫ್ರೀಡಂ ರಿಫೈನ್‌ಡ್ ಸನ್‌ಫ್ಲವರ್ ಆಯಿಲ್ 'ಕರುನಾಡ ಸವಿಯೂಟ'ದ ಮೂಲಕ ನೀವು ರಸಲೋಕದಲ್ಲಿ ವಿಹರಿಸುವಂತೆ ಮಾಡಲಿದ್ದಾರೆ.

### ಸಿಹಿ ಕಹಿ ಚಂದ್ರು



ಅಂಬೊಡೆ, ಮಂಗಳೂರು ಬನ್ಸ್, ಮಸಾಲೆ ದೋಸೆ– ಆಲೂಗೆಡ್ಡೆ ಪಲ್ಯ, ಬಿಸಿಬೇಳೆ ಬಾತ್, ಕೊಬ್ಬರಿ ಸಕ್ಕರೆ ಹೋಳಿಗೆ ಮಾಡುವುದರಲ್ಲಿ ಇವರು ನಿಸ್ಸೀಮರು. ಇವರ ಅಡುಗೆ ಸ್ವಾದಕ್ಕೆ ನೀವು ಖಂಡಿತಾ ಮರುಳಾಗುತ್ತೀರಿ.

### ಸುಜಾತಾ ಅಕ್ಷಯ



ಇವರು ತಯಾರಿಸುವ ಯೆರೆಯಪ್ಪ, ಶಂಕರಪೋಳಿ, ಐಯ್ಯಂಗಾರ್ ಪುಳಿಯೋಗರೆ, ಎಣ್ಣೆಗಾಯಿ ಹಾಗೂ ಮದ್ದೂರು ವಡೆಗಳು ಸ್ವರ್ಗದಡುಗೆಯ ಖುಷಿ ನೀಡುತ್ತವೆ.

### ಮುರಳಿ



ಇವರು ತಯಾರಿಸುವ ಕಾಣೆ ರವಾ ಫ್ರೈ, ಮಟನ್ ಪೆಪ್ಪರ್‌ಫ್ರೈ, ಪ್ರಾನ್ (ಸಿಗಡಿ ಮೀನು) ಫ್ರೈ, ಪಾಲಕ್ ಪೂರಿ– ನಾಟಿ ಕೋಳಿ ಮಸಾಲ ಮತ್ತು ದೊನ್ನೆ ಬಿರಿಯಾನಿಗಳನ್ನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ. ಈ ವಿಡಿಯೊಗಳು ಶೀಘ್ರವೇ ಆನ್‌ಲೈನ್‌ನಲ್ಲಿ ಲಭ್ಯ.